**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 14-01-2022.**

**ಪಾಟೀ ಸವಾಲು - ಶ್ರೀ. ಕೆ.ಎಸ್.ಬಿ., ವಕೀಲರಿಂದ**

2) ನಾನು ವ್ಯವಸಾಯ ಮಾಡುತ್ತೇನೆ. ಪಿಯುಸಿವರೆಗೆ ಓದಿದ್ದೇನೆ. ನನಗೆ ಸರ್ವೆನಂ.40-1 ರಲ್ಲಿ 1 ಎಕರೆ 30 ಗುಂಟೆ ಜಮೀನು ಇದೆ. ಅದನ್ನು ಕ್ರಯದ ಮೂಲಕ ನಾನೇ ಸಂಪಾದನೆ ಮಾಡಿದ್ದೇನೆ. ಆ ಜಮೀನು ಹೊಸಹೂಡ್ಯದಲ್ಲಿ ಇದೆ. ನನ್ನ ತಾತನ ಆಸ್ತಿ ನನ್ನ ಚಿಕ್ಕಪ್ಪ ಮತ್ತು ನನಗೆ ಬಂದಿದೆ. ನನಗೆ ನಮ್ಮ ಕುಟುಂಬಕ್ಕೆ ಇರುವ ಎಲ್ಲಾ ಸರ್ವೆ ನಂಬರ್ಗಳನ್ನು ಹೇಳಲು ಆಗುವುದಿಲ್ಲ, ಮತ್ತೆ ಹೇಳುತ್ತೇನೆ, ಕೆಲವೊಂದು ಮಾತ್ರ ಹೇಳಬಲ್ಲೆ, ಪುನಃ ಹೇಳುತ್ತೇನೆ, ಎಲ್ಲಾ ಹೇಳಬಲ್ಲೆ. ಈ ದಾವೆಯನ್ನು ಎಂ. ಮೂರ್ತಿ ಶಿವಣ್ಣನ ಮೇಲೆ ಹಾಕಿದ್ದಾರೆ. ಈ ದಾವೆಯಲ್ಲಿ ಇನ್ನೂ ಯಾರು ಯಾರು ಪಾರ್ಟಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಎಷ್ಟು ಆಸ್ತಿಗಳ ಬಗ್ಗೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿವಣ್ಣ ಅಣ್ಣ-ತಮ್ಮಂದಿರಿಗೆ ಬಿಟ್ಟಿದ್ದ ಆಸ್ತಿಯನ್ನು ಮಾರಿಕೊಂಡಿದ್ದಾರಂತೆ, ಅದರ ಬಗ್ಗೆಯೇ ಈ ದಾವೆ ಹಾಕಿದ್ದಾರೆ ಎಂದು ನನಗೆ ಗೊತ್ತು. ಈ ಸಂಗತಿಯನ್ನು ಮೂರ್ತಿ ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿ ಕುಟುಂಬದಲ್ಲಿ ಆಸ್ತಿಗಳ ಬಗ್ಗೆ ಏನೇನು ವ್ಯವಹಾರಗಳು ನಡೆದಿದ್ದವು ಎಂದು ಪೂರ್ಣವಾಗಿ ನನಗೆ ಮಾಹಿತಿ ಇಲ್ಲ, ಸ್ವಲ್ಪ ಸ್ವಲ್ಪ ಗೊತ್ತು. ಅವರ ಕುಟುಂಬದಲ್ಲಿ ವಿಭಾಗವಾದಾಗ ನಾನು ಹಾಜರಿದ್ದೆನೇ? ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಆ ದಿನದಂದು ಯಾವ ಯಾವ ಆಸ್ತಿಗಳನ್ನು ಯಾರು ಯಾರಿಗೆ ಹಿಸ್ಸೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ

ಪ್ರಮಾಣ ಪತ್ರದ ಸಂಗತಿಗಳನ್ನು ವಾದಿ ಹೇಳಿದ ಪ್ರಕಾರ ಟೈಪ್ ಮಾಡಿದ ನಂತರ ನಾನು ಅದರ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿ.  ನನಗೆ ದಾವಾ ಸ್ವತ್ತಿನ ಬಗ್ಗೆ ಮತ್ತು ವಾದಿ ಹಾಗೂ 1ನೇ ಪ್ರತಿವಾದಿ ನಡುವಿನ ವ್ಯವಹಾರಗಳ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ.  ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**